## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ:- 255/2023

| | | |
|---|---|---|
| **ಸಾಕ್ಷಿದಾರನ ಹೆಸರು** | : ಸುರೇಶ್ ಪಿ.ಬಿ | **ಪಿ.ಡಬ್ಲ್ಯೂ:-** 17 |
| **ತಂದೆಯ ಹೆಸರು** | : ಬಸವೇಗೌಡ | **ಸಿ.ಡಬ್ಲ್ಯೂ:-** 24 |
| **ವಯಸ್ಸು** | : 38 ವರ್ಷ | |
| **ಉದ್ಯೋಗ** | : ಹೆಚ್.ಸಿ, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ. | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:12.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ನಾನು ದಿ:–10.03.2022 ರಿಂದ ಇಲ್ಲಿಯವರೆಗೆ ಪೇದೆಯಾಗಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ:– 01.06.2023 ರಂದು ಚಾ.ಸಾ:30 ರವರು ನನ್ನನ್ನು ಹುಣಸ್ನಾಳು ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ಸದರಿ ಗ್ರಾಮದಲ್ಲಿ ಕೊಲೆಯಾಗಿರುತ್ತದೆ ಎಂದು ಕೃತ್ಯ ನಡೆದ ಸ್ಥಳದಲ್ಲಿ ಪರಿಶೀಲನೆ ಮಾಡಿ ಮಹಜರ್ ಮಾಡಲು ಚಾ.ಸಾ:30 ರವರು ಹೋಗಿದ್ದರು. ಆ ಸಮಯದಲ್ಲಿ ನಾನು ಚಾ.ಸಾ:30 ರವರ ಇಲಾಖಾ ವಾಹನದ ಚಾಲಕನಾಗಿದ್ದೆನು. ನಾನು ಚಾ.ಸಾ:30 ರವರ ನಿರ್ದೇಶನದ ಮೇರೆಗೆ ಕೃತ್ಯ ನಡೆದ

ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ನಾನು ಸದರಿ ಪೋಟೋಗಳನ್ನು ಇಲಾಖಾ ಸೋನಿ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ. ಆಗ ರಾತ್ರಿ 11.10 ರಿಂದ 12.30 ರವರೆಗೆ ಆಗಿತ್ತು. ಸದರಿ ನಾನು ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ.

3. ನಂತರ ಮಾರನೇ ದಿನ ಕೆ.ಆರ್ ಆಸ್ಪತ್ರೆಯ ಶವಗಾರಕ್ಕೆ ಚಾ.ಸಾಃ30 ರವರ ಜೊತೆ ಹೋಗಿದ್ದು, ಅಲ್ಲಿ ಕೂಡ ಚಾ.ಸಾಃ30 ರವರ ನಿರ್ದೇಶನದ ಮೇರೆಗೆ ಮೃತದೇಹದ ಶವ ಪಂಚನಾಮೆ ಕಾಲದಲ್ಲಿ ಪೋಟೋಗಳನ್ನು ಇಲಾಖಾ ಕ್ಯಾಮೆರಾದಲ್ಲಿ ತೆಗೆದಿರುತ್ತೇನೆ. ನಂತರ ಸದರಿ 2 ದಿನ ತೆಗೆದ ಪೋಟೋಗಳನ್ನು ಚಾ.ಸಾಃ30 ರವರ ನಿರ್ದೇಶನದ ಮೇರೆಗೆ ನಂಜನಗೂಡಿನಲ್ಲಿರುವ ಸಂತೋಷ್ ಪೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ, ಸದರಿ ಪೋಟೋಗಳನ್ನು ಚಾ.ಸಾಃ30 ರವರ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಸದರಿ ಪೋಟೋಗಳಿಗೆ ಸಂಬಂಧಿಸಿದಂತೆ ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–29 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–29(ಎ) ಎಂದು ಗುರುತಿಸಲಾಯಿತು. ಪೋಟೋಗಳನ್ನು ತೆಗೆಯುವ ಕಾಲಕ್ಕೆ ಇಲಾಖಾ ಕ್ಯಾಮೆರಾ ಸುಸ್ಥಿತಿಯಲ್ಲಿತ್ತು. ಸ್ಥಳದಲ್ಲಿ ತೆಗೆದ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿಶಾನೆ ಪಿ–3 ರಿಂದ ನಿಶಾನೆ ಪಿ–8 ರಲ್ಲಿರುವ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

**4.** ನಾನು ಇನ್ಸಪೆಕ್ಟರ್ ರವರ ಕಚೇರಿಯಲ್ಲಿ ಚಾಲಕನಾಗಿ ಇದ್ದ ಕಾರಣ ನನಗೆ ಜೀಪಿನ ಉಸ್ತುವಾರಿ ಇರುತ್ತದೆ ಎಂದರೆ ಸರಿ. ಠಾಣೆಯಲ್ಲಿರುವ ಕ್ಯಾಮೆರಾ, ಕಂಪ್ಯೂಟರ್, ವಿಡಿಯೋ ರೆಕಾರ್ಡರ್ ಗಳು ಇನ್ಸಪೆಕ್ಟರ್ ರವರ ಸುಪರ್ದಿಯಲ್ಲಿರುತ್ತವೆ ಎಂದರೆ ಸರಿ. ಆ ದಿನ ಕ್ಯಾಮೆರಾವನ್ನು ನಿಮ್ಮ ವಶಕ್ಕೆ ನೀಡಿ ಲಿಖಿತವಾಗಿ ಪೋಟೋಗಳನ್ನು ತೆಗೆಯುವ ಬಗ್ಗೆ ಅಧಿಕಾರ ನೀಡಿರುತ್ತಾರೆಯೇ? ಎಂದರೆ ಸಾಕ್ಷಿಯು ಇಲ್ಲ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಪೋಟೋಗಳನ್ನು ನಮ್ಮ ಕಂಪ್ಯೂಟರ್ ನಿಂದ ಪ್ರಿಂಟ್ ಔಟ್ ತೆಗೆದಿರುವುದಿಲ್ಲ. ಸಂತೋಷ್ ಸ್ಟುಡಿಯೋ ನಮ್ಮ ಸುಪರ್ದಿಯಲ್ಲಿರುವುದಿಲ್ಲ ಅದರ ಮಾಲೀಕರ ಸುಪರ್ದಿಯಲ್ಲಿರುತ್ತದೆ ಎಂದರೆ ಸರಿ. ಅದನ್ನು ಯಾರು ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಂತೋಷ್ ಸ್ಟುಡಿಯೋದಲ್ಲಿರುವ ಕಂಪ್ಯೂಟರನ್ನು ಉಪಯೋಗಿಸಿ ನೀವು ಪೋಟೋಗಳನ್ನು ಪ್ರಿಂಟ್ ಹಾಕಿರುತ್ತೀರಿಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಟೋಗಳನ್ನು ಪ್ರಿಂಟ್ ಯಾರು ಹಾಕಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸಂತೋಷ್ ಎನ್ನುವವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಇಲಾಖ ಕ್ಯಾಮೆರಾದಲ್ಲಿದ್ದ ಪೋಟೋಗಳನ್ನು ಸಂತೋಷ್ ತಮ್ಮ ಕಂಪ್ಯೂಟರಿಗೆ ಹಾಕಿ ನಂತರ ಪ್ರಿಂಟ್ ತೆಗೆದಿರುತ್ತಾರೆ ಎಂದರೆ ಸರಿ. ನೀವು ನೀಡಿದ ಪ್ರಮಾಣ ಪತ್ರದಲ್ಲಿ ಕ್ಯಾಮೆರಾದಲ್ಲಿದ್ದ ಪೋಟೋಗಳನ್ನು ಸಂತೋಷ್ ಕಂಪ್ಯೂಟರಿಗೆ ಹಾಕಿ ಪ್ರಿಂಟ್ ತೆಗೆದಿರುತ್ತಾರೆ ಎಂಬ ವಿಚಾರವನ್ನು ನಮೂದಿಸಲಾಗಿರುತ್ತದೆಯೇ? ಎಂದರೆ ಸಾಕ್ಷಿಯು ಇಲ್ಲ ಎಂದು

ನುಡಿದಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಸಂತೋಷ್ ಸ್ಟುಡಿಯೋದ ಯಾವ ಕಂಪ್ಯೂಟರ್ ಅದರ ಮಾಡೆಲ್ ಮತ್ತು ಇತರೆ ವಿವರಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಕ್ಯಾಮೆರಾದಿಂದ ಯಾವ  ಸಾದನವನ್ನು ಬಳಸಿ ಕಂಪ್ಯೂಟರಿಗೆ ಹಾಕಿರುತ್ತಾರೆ ಎಂಬುದರ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಪೋಟೋಗಳನ್ನು ಠಾಣೆಯಲ್ಲಿ ಸೃಷ್ಟಿಸಲಾಗಿರುತ್ತದೆ ಸಂತೋಷ್ ಪ್ರಿಂಟ್ ಹಾಕಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ತನಿಖಾಧಿಕಾರಿಯವರ  ಕೋರಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**